


ಹತ್ತಿರವಾದಂತೆ ಮನೆಯನ್ನು ಬಿಟ್ಟು ಸುರಕ್ಷಿತ ಸ್ಥಳಗಳಿಗೆ ತೆರಳುವವರು ತಮ್ಮ ನಾಯಿ ಮತ್ತು ಬೆಕ್ಕುಗಳನ್ನು ಒಡನೆ ಒಯ್ದಿದ್ದಾರೆ. ಆದರೆ ಕಾಡುಪ್ರಾಣಿಗಳನ್ನು ಕಾಪಾಡುವವರಾರು? ಸುಮಾರು 500 ದಶಲಕ್ಷ ಪ್ರಾಣಿಗಳು ಹತವಾಗಿವೆ ಎಂದು ಅಂದಾಜುಮಾಡಲಾಗಿದೆ. ಒಂದು ರೀತಿಯಲ್ಲಿ ಪರಿಸರವೇ ನಾಶವಾಗಿದೆ. ಅದರೂ ಕೆಲವರು ಕಾಡುಪ್ರಾಣಿಗಳ ಶುಶ್ರೂಷೆಗೆ ಪಣ ತೊಟ್ಟಿದ್ದಾರೆ. ಕೋಲ ಮುಂತಾದುವುಗಳನ್ನು ಕಂಡ ಜನ ಇಲ್ಲಿಗೆ ಕೊಂಡೊಯ್ಯುತ್ತಿದ್ದಾರೆ. ಅವುಗಳ ನಿಗಾ ವಹಿಸಿರುವ ವೈದ್ಯರ ಪಡೆಯೇ ಇದೆ. ಮೊನ್ನೆ ಇಲ್ಲಿಯ ಹೆದ್ದಾರಿಯಲ್ಲಿ ಕಂಡ ಕೋಲವನ್ನು ರಕ್ಷಿಸಲು ಓರ್ವರು ತಮ್ಮ ಕಾರನ್ನು ಮತ್ತು ಮಿಕ್ಕ ಕಾರುಗಳನ್ನು ನಿಲ್ಲಿಸಿ ಅದನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿದರು.

ಮೂರು ಪ್ರಾಂತ್ಯಗಳಲ್ಲಿ ಬೆಂಕಿ ತಾಂಡವವಾಡಿದೆ – ಸಿಡ್ನಿಯಿರುವ ನ್ಯೂ ಸೌತ್ ವೇಲ್ಸ್, ಮೆಲ್ಬರ್ನ್ ಇರುವ ವಿಕ್ಟೋರಿಯಾ ಮತ್ತು ಅಡಿಲೈಡ್ ಇರುವ ಸೌತ್ ಆಸ್ಟ್ರೇಲಿಯಾ. ಸುಮಾರು ಹತ್ತುಸಾವಿರ ಮಂದಿ ಅಗ್ನಿಶಮನ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರುಗಳಲ್ಲಿ ಬಹು ಪಾಲು ಜನ ಸ್ವಯಂಸೇವಕರು. ಸಾಮಾನ್ಯವಾಗಿ ಇವರಿಗೆ ಸಂಬಳವಿಲ್ಲ. ಈ ವರ್ಷ ಮಾತ್ರ ಸರ್ಕಾರ ಅವರಿಗೆ ಪರಿಹಾರ ನೀಡಿದೆ. ಭಾರತದಂತಹ ದೇಶಗಳಲ್ಲಿ ಕಾಣದ ಸೋಜಿಗವನ್ನು ಇಲ್ಲಿ ಕಾಣಬಹುದು. ಇಂತಹ ಪರಿಸ್ಥಿತಿ ಉದ್ಭವಿಸಿದಾಗ ಆಸ್ಟ್ರೇಲಿಯಾದ ಮಾಜಿ ಪ್ರಧಾನಮಂತ್ರಿ ಟೋನಿ ಅಬಟ್ ಅವರು ಮಿಕ್ಕವರಂತೆ ಸಮವಸ್ತ್ರ ಧರಿಸಿ ಬೆಂಕಿಯಾರಿಸುವುದರಲ್ಲಿ ನೆರವಾಗಿದ್ದಾರೆ. ಅವರು ಹೀಗೆ ಮುಂದೆಬಂದಿರುವುದು ಮೊದಲ ಬಾರಿಯೇನಲ್ಲ. ಅವರ ಸುತ್ತ ಬಾಜಾಬಜಂತ್ರಿ ಏನೂ ಇರುವುದಿಲ್ಲ. ತೀರಾ ಸಾಮಾನ್ಯ ಸ್ವಯಂಸೇವಕನಂತೆ ವರ್ತಿಸುತ್ತಾರೆ. ಇದೇ ತರಹ ಮತ್ತೂ ಕೆಲವು ನಾಯಕರಿದ್ದಾರೆ.

ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳದ ಮೂವರು ಮೃತಪಟ್ಟರು. ಇಡೀ ದೇಶ ಕಂಬನಿಗರೆಯಿತು. ಕಾಡ್ಗಿಚ್ಚು ಪ್ರಾರಂಭವಾದ ದಿನಗಳಲ್ಲಿ ದೇಶದ ಇಂದಿನ ಪ್ರಧಾನಿ ಸ್ಕಾಟ್ ಮಾರಿಸನ್ ಹವಾಯಿಯಲ್ಲಿ ವಿರಮಿಸುತ್ತಿದ್ದರು. ಕುಪಿತರಾದರು ಇಲ್ಲಿಯ ಜನ. ದಿಗಿಲಾಗಿ ಪ್ರಧಾನಿ ವಾಪಸ್ ಧಾವಿಸಿದರು. ಹೋದೆಡೆಯಲ್ಲೆಲ್ಲ ಛೀಮಾರಿ ಅವರಿಗೆ. ಮೊನ್ನೆ ಕೊಬಾರ್ಗೋ ಎಂಬ ಹಳ್ಳಿಗೆ ಹೋದರೆ ಅಲ್ಲಿಯ ಜನ ಅವರನ್ನು ವಾಚಾಮಗೋಚರ ಬೈದರು. ಅವರು ಕೈ ಚಾಚಿದರೂ ಕುಲುಕುವ ಮಂದಿ ಇರಲಿಲ್ಲ.

ಹಾನಿಗೊಳಗಾದವರಿಗೆ ನೆರವಾಗಲು ಇಲ್ಲಿಯ ಜನ ಸದಾ ಸಿದ್ಧ. ಖ್ಯಾತ ಹಾಸ್ಯಗಾರ್ತಿ ಸೆಲೆಸ್ಟೆ ಬಾರ್ಬರ್ ಒಬ್ಬರೇ 45 ದಶಲಕ್ಷ ಡಾಲರುಗಳನ್ನು ಸಂಗ್ರಹಿಸಿದ್ದರೆ, ಕ್ರಿಕೆಟ್ ಪಟು ಸ್ಟೀವ್ ವಾ ತಮ್ಮ ಹ್ಯಾಟನ್ನು ಹರಾಜಿಗೆ ಇಟ್ಟಿದ್ದಾರೆ, ಒಂದೆರಡು ಕ್ರಿಕೆಟ್ ಪಂದ್ಯಗಳೂ ನಡೆಯಲಿವೆ, ಎಲ್ಟನ್ ಜಾನ್ ಅವರ ಸಂಗೀತವೂ ಏರ್ಪಟ್ಟಿದೆ. ಇಲ್ಲಿಯ ಸ್ಥಳೀಯ ಸಂಸ್ಥೆಗಳು ಸಂತ್ರಸ್ತರಿಗೆ ಆಹಾರ ಸರಬರಾಜು ಮಾಡಲು ಮುಂದೆಬಂದಿವೆ. ಈಗಾಗಲೇ 145 ದಶಲಕ್ಷ ಡಾಲರುಗಳ ಸಂಗ್ರಹವಾಗಿದೆ. ಪೋರ್ಟ್ ಮಕ್ವಾರಿ ಎಂಬ ನಗರದಲ್ಲಿನ ಕೋಆಲಾ ಆಸ್ಪತ್ರೆಗೆ 5 ದಶಲಕ್ಷ ಡಾಲರ್ ಹಣ ಹರಿದುಬಂದಿದೆ.

ಇಷ್ಟೆಲ್ಲಾ ಹಾನಿಗೆ ಏನು ಕಾರಣ? ಮೊದಲನೆಯದಾಗಿ ಆಸ್ಟ್ರೇಲಿಯಾನಲ್ಲಿ ಪ್ರತಿವರ್ಷ ಕಾಡ್ಗಿಚ್ಚು ಉದ್ಭವಿಸುತ್ತದೆ. ಆದರೆ ಈ ಪ್ರಮಾಣದಲ್ಲಲ್ಲ. ಈ ಬಾರಿ ಅದಕ್ಕೆ ಪ್ರೇರಕವಾಗಿದ್ದು ಮಳೆ ಇಲ್ಲದೆ ಒಣಗಿಹೋಗಿದ್ದ ವನ್ಯಪ್ರದೇಶ. ಸರಿಯಾದ ಮಳೆಯಾಗಿ ಮೂರು ವರ್ಷಗಳಾಗಿವೆ. ಭೂಮಿ ಬಿರಿದುಹೋಗಿದೆ. ಸಾಲದ್ದಕ್ಕೆ ಬಿಸಿಲುಗಾಲ ಪ್ರಾರಂಭವಾಗುವುದಕ್ಕೆ ಮುಂಚೆಯೇ ಉಷ್ಣಾಂಶ 35ರಿಂದ 45 ಡಿಗ್ರಿ ವರೆಗೆ. ಇವು ಕಾಡ್ಗಿಚ್ಚಿಗೆ ಆಹ್ವಾನ ನೀಡಿದವು. ಕೆಲವೆಡೆ ಪರಿಸ್ಥಿತಿ ಕೈಮೀರಿ ಹೋಯಿತು. ಇದಕ್ಕೆ ಪ್ರಬಲ ಕಾರಣವನ್ನು ಗುರುತಿಸಲಾಗಿದೆ. ಅದು ಹಿಂದೂ ಮಹಾಸಾಗರದ ಪೂರ್ವ ಮತ್ತು ಪಶ್ಚಿಮ ಬಾಗಗಳಲ್ಲಿನ ಉಷ್ಣಾಂಶದ ವ್ಯತ್ಯಾಸ. ಹೋದ ವರ್ಷ ಅದರ ಪಶ್ಚಿಮ ಭಾಗವಾದ ಆಫ್ರಿಕಾ ತೀರದಲ್ಲಿ ಉಷ್ಣಾಂಶ ಪೂರ್ವ ಭಾಗಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದದ್ದೇ ಇದಕ್ಕೆ ಕಾರಣ ಎನ್ನಲಾಗಿದೆ.

ವಿಜ್ಞಾನಿಗಳು ಮತ್ತು ಪರಿಸರಜ್ಞರು ಸರ್ಕಾರಗಳಿಗೆ ಈ ಬಗ್ಗೆ ಎಚ್ಚರವನ್ನು ಎಂದಿನಿಂದಲೋ ಕೊಡುತ್ತಾ ಬಂದಿದ್ದಾರೆ. ಆದರೆ ಬಂದ ಸರ್ಕಾರಗಳೆಲ್ಲ ಕಿವುಡಾಗಿವೆ. ಪ್ರಕೃತಿಯ ವಿಕೋಪದೊಂದಿಗೆ ಕೆಲವು ಸಮಾಜ ದ್ರೋಹಿಗಳು ಬೆಂಕಿಯನ್ನು ಬೇಕೆಂದೇ ಹಚ್ಚಿದರು ಎಂದರೆ ಆಶ್ಚರ್ಯವಾಗುತ್ತದೆ. ಕೆಲವೊಮ್ಮೆ ಚೇಷ್ಟೆಗಾಗಿ ಹುಡುಗರು ಈ ಕೆಲಸದಲ್ಲಿ ನಿರತರಾಗುತ್ತಾರೆ. ಇಲ್ಲಿಯ ಕಾನೂನು ಸಡಿಲ. ಮೊನ್ನೆ ಸಿಕ್ಕಿಹಾಕಿಕೊಂಡ ಇಬ್ಬರನ್ನು ನ್ಯಾಯಾಧೀಶರು ಜಾಮೀನಿನ ಮೇಲೆ ಬಿಟ್ಟಿದ್ದಾರೆ!

ಮನೆ ಮಠ ಎಲ್ಲವನ್ನೂ ಕಳೆದುಕೊಂಡ ಓರ್ವ ದಂಪತಿ ಬೂದಿಯ ಮೇಲೆ ಕುಳಿತು ಹೇಳಿದ್ದು ಗಮನಾರ್ಹ. "ನಮ್ಮದೆಲ್ಲಾ ಹೋಯಿತು. ಪ್ರಾಣ ಉಳಿದಿದೆ ನೋಡಿ. ಮುಂದೆ ಮನೆ ಇತ್ಯಾದಿಗಳನ್ನ ಕಟ್ಟಿಕೋಬಹುದು. ಪ್ರಾಣಾನೂ ಹೋಗಿದ್ರೆ ಏನು ಮಾಡಬಹುದಿತ್ತು?".